ಶ್ರೀ ಎನ್. ಬನವಯ್ಯ.—ಇವೊತ್ತು ಕೊಡತಕ್ಕ 2 ಲಕ್ಷ ರೂಪಾಯಿಗಳಿಂದ ಕ್ಲೈಬಿಡ್ಜ್ ಕಟ್ಟುವುದಕ್ಕಾಗುವುದಿಲ್ಲ ಎಂದು ಅವರು ಆನಮ್ಮತಿ ನೂಚಿನಲು ಕಾರಣ ಏನು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಅವರು 16 ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ. ಅವರು ನಮ್ಮಲ್ಲರತಕ್ಕ ಸಿಬ್ಬಂದಿ ವರ್ಗೆರೆ ಸಾಲುವುದಿಲ್ಲ, ಬೇರೆಯವರಿಗೆ ಈ ಕೆಲಸವನ್ನು ಕೊಡಿ ಎಂದು ಹೇಳಿದ್ದಾರೆ.

ಶ್ರೀ ಎನ್. ಬನವಯ್ಯ.—ಇವೊತ್ತು ಬೇರೆಯವರು ಹೆಚ್ಚಿಗೆ ಚೆಂಡರ್ ಕೇಳಿದರೆ ಕೊಡುವುದಕ್ಕೆ ಆಗುವುದಿಲ್ಲ. ತಾವು ಈ ರೀತಿ ಮುಂದುವರೆಸುವುದರಿಂದ ಆಲ್ಲರತಕ್ಕ ರೈತರಿಗೆ ಬಹಳ ತೊಂದರೆ ಯಾಗುತ್ತದೆ, ಆದುದರಿಂದ ಈ ಕೆಲಸವನ್ನು ಡಿಪಾರ್ಟ್‌ಮೆಂಟ್ ಮುಖಾಂತರ ಮಾಡಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—1972-73ನೇ ಇಸವಿಯಿಂದ ಇಲ್ಲಿಯವರೆಗೂ ನಾಲ್ಕೈದು ಸಾರಿ ಚೆಂಡರ್ ಕರೆದು, ಪ್ರೈವೇಟ್ ನೆಗೋಸಿಯೇಷನ್ ಮಾಡಿದರೂ ಕೂಡ ಪ್ರತಿ ವರ್ಷ 20 ಸಾವಿರ, 30 ಸಾವಿರ. 40 ಸಾವಿರ ರೂಪಾಯಿ ಹೀಗೆ ಬಡ್ಜೆಟ್ಟಿನಲ್ಲಿ ಸೇರಿಸಿದರೂ ಕೂಡ ಈ ಕೆಲಸ ತೆಗೆದುಕೊಳ್ಳಲಿಕ್ಕೆ ಆಗಿಲ್ಲ ಇವೊತ್ತು ಪಿ.ಡಬ್ಲ್ಯು ಡಿ. ಇರಾಖೆಯಲ್ಲ ಸಾಕಷ್ಟು ಜನ ಇಂಜಿನಿಯರುಗಳು ಇರುವುದರಿಂದ ಇದನ್ನು ನಮ್ಮ ಇಂಜಿನಿಯರುಗಳ ಮುಖಾಂತರವೇ ಮಾಡಿಸಬೇಕು ಎಂದು ತೀರ್ಮಾನವಮಾಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ.—ಬ್ರಿಡ್ಜಸ್ ಕಾರ್ಪೊರೇಷನ್‌ನವರು 1971-72ನೇ ಇಸವಿಯಿಂದ ಸಿಬ್ಬಂದಿ ವರ್ಗ ಇಲ್ಲ ಎಂದು ಹೇಳುತ್ತಾ ಇದ್ದಾರೋ ಅಥವಾ ಇತ್ತೀಚೆಗೆ ನಮ್ಮಲ್ಲಿ ಸಿಬ್ಬಂದಿ ವರ್ಗ ಇಲ್ಲ ಎಂದು ಹೇಳುತ್ತಾ ಇದ್ದಾರೋ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬ್ರಿಡ್ಜ್ ಕಾರ್ಪೊರೇಷನ್ ಬಂದಿದ್ದು 1975ನೇ ಇಸವಿಯಿಂದ ಈಚೆಗೆ. ಇವೊತ್ತು ಅವರು ನಮ್ಮಲ್ಲ ಸಾಕಷ್ಟು ಸಿಬ್ಬಂದಿ ಇಲ್ಲ ಎಂದು ಹೇಳಿದ್ದಾರೆ, ಈಗ ನಮ್ಮ ಇರಾಖೆಯಲ್ಲ ಸಾಕಷ್ಟು ಸಿಬ್ಬಂದಿ ಇರುವುದರಿಂದ ನಮ್ಮ ಇಂಜಿನಿಯರ್ ಕಡೆಯಿಂದಲೇ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಇವೊತ್ತು ಬ್ರಿಡ್ಜ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ದಕ್ಷತೆಯಿಂದ ಕೆಲಸ ಮಾಡಲಕ್ಕೆ ಅಲ್ಲಿ ನಾನ್ ಅಫಿಷಿಯರ್ ಜೇರಮೆನ್ ನೇಮಕ ಮಾಡಲಕ್ಕೆ ಏನಾದರೂ ಯೋಚನೆ ಮಾಡಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದರಲ್ಲಿ ಜೇರ್‌ಮೆನ್ ನೇಮಕ ಮಾಡುವ ಪ್ರಶ್ನೆಯೇ ಇಲ್ಲ. ಅಲ್ಲಿ ಚೀಫ್ ಇಂಜಿನಿಯರ್ ಕೂಡ ಬದರಾಯಿನಬಹುದು. ಅಲ್ಲಿ ಜೇರ್‌ಮೆನ್ ನೇಮಕ ಮಾಡಲಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮುಖ್ಯಮಂತ್ರಿಗಳವರ ಕಚೇರಿಯಲ್ಲ ಯಾವ ಯಾವ ಕಾರ್ಪೊರೇಷನ್‌ಗೆ ಯಾರು ಯಾರನ್ನು ಜೇರ್‌ಮೆನ್ ಮಾಡಬೇಕು ಎನ್ನುವ ಬಗ್ಗೆ ಒಂದು ಪಟ್ಟಿ ತಯಾರಾಗುತಿ ದೆ ಎಂದು ಕೇಳಿದೆ. ಅದು ನಿಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ನನ್ನ ಗಮನಕ್ಕೆ ಬಂದಿಲ್ಲ, ಅದು ಒಂದು ಬಿಳಿ ಆನೆಯಂತೆ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

Construction of Bridges by the Construction Corporation

367. SRI KAGODU THIMMAPPA(Sagar).—Will the Minister for Public Works be pleased to state.—

(*a*) the number of bridges entrusted to the State Construction Corporation by the Government ;

(*b*) the amount advanced so far ;

(*c*) the number of bridges in respect of which work has been completed ?

SRI M. MALLIKARJUNA SWAMY (Minister for Public Works).—

(*a*) 19 bridges have been entrusted.

(*b*) Rs 23,93,600 has been advanced.

(*c*) No bridge has been completed so far.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮಾನ್ಯ ಚನ್ನಬಸಪ್ಪನವರ ತೊಟ್ಟಿಲ ಶಿಶು. 19 ಸೇತುವೆಗಳನ್ನು ಕಟ್ಟಲು ಸರ್ಕಾರದವರು 23 93, 600 ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟಿದ್ದರೂ ಇದುವರೆಗೂ ಒಂದೂ ಕೆಲಸವಾಗಿಲ್ಲ ಎಂದು ಹೇಳಿದ್ದೀರಿ. ಪಿಡಬ್ಲ್ಯೂ.ಡಿ.ನವರು ತೆಗೆದುಕೊಂಡಿರುವ ಮೆಷರ್‌ಮೆಂಟ್ ಪ್ರಕಾರ ಈ ಸೇತುವೆಗಳಿಗಾಗಿ ಎಷ್ಟು ಹಣ ಖರ್ಚಾಗಿದೆ ಮತ್ತು ಎಷ್ಟು ಹಣ ಉಳಿತಾಯವಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ 19 ಸೇತುವೆಗಳ ನಿರ್ಮಾಣದ ಬಗ್ಗೆ ಎಷ್ಟೆಷ್ಟು ಹಣ ಖರ್ಚಾಗಿದೆ ಎನ್ನುವುದಕ್ಕೆ ಪ್ರತ್ಯೇಕ ಪ್ರತ್ಯೇಕವಾದ ವಿವರಗಳು ಇಲ್ಲಿದೆ. ಅದನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾರೀಖು 29-6-1977ರಲ್ಲಿ ಮಾನ್ಯ ರೋಕೋಪಯೋಗಿ ಮಂತ್ರಿಗಳ ಹೆಸರಿಗೇ ಒಂದು ಅರ್ಜಿ ಬಂದಿದೆ. ಆ ಅರ್ಜಿಯ ದೂರಿನ ಪ್ರಕಾರ ಶಿವಮೊಗ್ಗ ಜಿಲ್ಲೆಯಲ್ಲಿರುವ 5 ಬ್ರಿಡ್ಜ್‌ಗಳಿಗೋಸ್ಕರ ಅವರಿಗೆ ಕೊಟ್ಟಿರತಕ್ಕ ಹಣದ ಪೈಕಿ ಮುಡುಪ ಬ್ರಿಡ್ಜ್‌ಗೆ, ತುಂಗ ಬ್ರಿಡ್ಜ್‌ಗೆ ತೀರ್ಥ ಮುತ್ತೂರು ಬ್ರಿಡ್ಜ್‌ಗೆ, ಭದ್ರಾ ಬ್ರಿಡ್ಜ್‌ಗೆ ಮತ್ತು ಮುಗುಳಿ ಬ್ರಿಡ್ಜ್‌ಗೆ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ ? ಆದರಲ್ಲಿ ಎಷ್ಟೆಷ್ಟು ಹಣ ಉಳಿದಿದೆ ? ಮತ್ತು ಕೆಲಸ ಎಷ್ಟಾಗಿದೆ ಎನ್ನುವ ಬಗ್ಗೆ ವಿವರಗಳನ್ನು ತಿಳಿಸುತ್ತೀರಾ ಸ್ವಾಮಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಾವು ಏನು ಹಣವನ್ನು ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಮುಂಗಡವಾಗಿ ಕೊಟ್ಟಿದ್ದೇವೆ ಅದನ್ನು ಖರ್ಚು ಮಾಡಿದ್ದಾರೆ. ಅಲ್ಲಿ ಹಣ ಏನೂ ದುರುಪಯೋಗವಾಗಿಲ್ಲ ಹಣ ಖರ್ಚಾಗಿದೆ ಸ್ವಲ್ಪ ಸ್ವಲ್ಪ ಕೆಲಸಗಳಾಗಿದೆ. 9 ಜಿಲ್ಲೆಗಳಲ್ಲಿ 19 ಕೆಲಸಗಳನ್ನು ತೆಗೆದುಕೊಂಡಿದ್ದು ಅದರಲ್ಲಿ ಯಾವುಯಾವುದಕ್ಕೆ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬ ವಿವರವನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಇದನ್ನೆಲ್ಲಾ ಪರಿಶೀಲನೆ ಮಾಡಿದಮೇಲೆ ಕಂಡುಬಂದಿರುವಂತೆ ಯಾವ ಯಾವ ಬ್ರಿಡ್ಜ್‌ಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ ಈ ಹಣ ಖರ್ಚುಮಾಡಿರುವುದಕ್ಕೆ ಆಕ್ಯುಯರ್ ಪ್ರೊಗ್ರೆಸ್ ರೆಕಾರ್ಡ್ ಮಾಡಿದೆಯೆ ? ಕೊಟ್ಟಿರುವಷ್ಟು ಹಣ ಖರ್ಚಾಗಿದೆಯೇ? ಅಥವಾ ಹೆಚ್ಚಿಗೆ ಖರ್ಚಾಗಿದೆಯೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮುಡುಪ, ಮತ್ತು ತೀರ್ಥಮುತ್ತುಬ್ರಿಡ್ಜ್‌ಗಳನ್ನು ಪ್ರಾರಂಭಿಸಿದ್ದು ಯಾವಾಗ ಮತ್ತು ಮುಗಿಸಿದ್ದು ಯಾವಾಗ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಶಿವಮೊಗ್ಗ ಜಿಲ್ಲೆಯಲ್ಲಿ 5 ಬ್ರಿಡ್ಜ್‌ಗಳನ್ನು ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಕೊಟ್ಟಿದ್ದೇವೆ. ಈ ಬ್ರಿಡ್ಜ್‌ಗಳನ್ನು ಪ್ರಾರಂಭಿಸಿದ್ದು ಸಬ್‌ಮರ್ಸಿಬಲ್ ಬ್ರಿಡ್ಜ್ ಆಕ್ಯಾಸ್ ಭದ್ರಾ ರಿವರ್ 4—8—1976ರಲ್ಲಿ ಮುಡುಪ ನಿಯರ್ ತುಂಗಾ ರಿವರ್ ಇದು ಬ್ಯಾಲನ್ಸ್ ವರ್ಕ್ ಇದನ್ನು 1—1—1976ರಲ್ಲಿ ಕೊಟ್ಟಿದೆ. ಬ್ರಿಡ್ಜ್ ಆಕ್ಯಾಸ್ ತುಂಗಾ ರಿವರ್ ನಿಯರ್ ಸರ್ವೆಪಾಳ್ಯ 14-8-1975ರಲ್ಲಿ ಇನ್ನೊಂದು ಭದ್ರಾರಿವರ್ ಹತ್ತಿರ 4—8—75ರಲ್ಲಿ ಇವುಗಳಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೇವೆ, ಎಷ್ಟೆಷ್ಟು ಕೆಲಸವಾಗಿದೆ ಎಂಬುದನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ತಾವು ಕೊಟ್ಟಿರುವುದು ಕಂಟ್ರಾಕ್ಟ್ ಅಂತ ಅಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ,—ಇದಕ್ಕೆ ಸರ್ಕಾರದವರು ಒಂದು ಪ್ರೊಸೀಜರ್ ಹಾಕಿ ಕೊಂಡು ಅದರ ಪ್ರಕಾರ ಆ ಕೆಲಸವನ್ನು ಟೆಂಡರ್ ಕರೆಯುದೆಯೇ ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನು ಯಾವ ರೇಟ್ ಮೇಲೆ ಕೊಟ್ಟಿದ್ದೀರಿ ? ಮತ್ತು ಯಾವ ಯಾವ ವರ್ಷದಲ್ಲಿ ಕೊಟ್ಟಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಷೆಡ್ಯೂರ್ ರೇಟ್ ಪ್ಲಸ್ 15 ಪರ್ಸೆಂಟ್‌ನಂತೆ ಕೊಟ್ಟಿದ್ದೇವೆ. ಇದಕ್ಕೆ ಸಂಬಂಧಪಟ್ಟ ವಿವರಗಳನ್ನು ನಭೆಯ ಮುಂದಿಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಅವರಿಗೆ ಹಣ ಕೊಡಬೇಕಾದರೆ ಅದಕ್ಕೆ ಬಿಲ್ ಮಾಡಬೇಕು, ಅದನ್ನು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಪ್ರೂಡ್ಯೂಸ್ ಮಾಡಬೇಕು, ಇನ್ನೂ ಏನೇನೋ ಪ್ರೊಸೀಜರ್‌ಗಳು ಇವೆ. ಅದನ್ನೆಲ್ಲಾ ಅಡಾಪ್ಟ್ ಮಾಡಿದ್ದಾರೆಯೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದೆಲ್ಲಾ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದಿಂದ ಇವತ್ತು 23 ಲಕ್ಷ 93 ಸಾವಿರದ 600 ರೂಪಾಯಿಗಳನ್ನು ಕೊಟ್ಟಿದ್ದರೂ ಸಕಾಲದಲ್ಲಿ ಅದನ್ನು ಖರ್ಚುಮಾಡಲಿಲ್ಲ. ಇದರಿಂದ ಪ್ರತಿ ವರ್ಷವೂ ಆಯಾ ವರ್ಷದ ಷೆಡ್ಯೂಲ್ ರೇಟ್ ಮತ್ತು 15 ಪರ್ಸೆಂಟ್ ಹಣ ಹೆಚ್ಚಿಗೆ ಕೊಡಬೇಕಾಗುತ್ತದೆ ಇದರಿಂದ ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್ ಕೂಡ ಜಾಸ್ತಿಯಾಗುತ್ತದೆ. ಆದುದರಿಂದ ಇದನ್ನು ಮನಗಂಡು ತಾವು ಇದನ್ನು ಸರಿಪಡಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರಿಗೆ ಇಷ್ಟು ಮಾತ್ರ ಹೇಳಬಯಸುತ್ತೇನೆ. ಒಟ್ಟು ಅಂದಾಜು 2 ಕೋಟಿ 22 ಲಕ್ಷದ 50 ಸಾವಿರ ರೂಪಾಯಿ ಆದರಲ್ಲಿ ನಾವು ಈಗ ಕೊಟ್ಟಿರುವುದು 23,93,600 ರೂಪಾಯಿಗಳು.

ಶ್ರೀ ಕಾಗೋಡು ತಿಮ್ಮಪ್ಪ.—ಅಷ್ಟಾದರೂ ಇನ್‌ವೆಸ್ಟ್ ಆಗಿರಬೇಕಲ್ಲಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದರ ಬಗ್ಗೆ ವಿವರಗಳನ್ನು ನಭೆಯ ಮುಂದಿಡುತ್ತೇನೆ.

Repairs of Bandihalli Tank Bund in Hassan Constituency

441. K. H. HANUMEGOWDA (Hassan) —Will the Minister of State for Minor Irrigation and Protocal, be pleased to state.—

(*a*) whether it has come to the notice of the Government that the Bandihalli Tank Bund Shantigram village of Hassan Constituency, has developed some cracks and the wasteweir of the Tank is also not in good condition;

(*b*) whether the plans and estimates are prepared for repairing this tank bund, if so, the estimated cost ;

(*c*) whether it has come to the notice of the Government that Achkatdars of this tank are loosing crops every year due to non-repair of this tank bund;

SRI H. C. SRIKANTAIAH (Minister of State of Minor Irrigation and Protocal).—

(*a*) No.